# <u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:-** **ದೇವನಹಳ್ಳಿ – ವಿಜಯಪುರ - ಹೆಚ್.ಕ್ರಾಸ್ – ವೇಮಗಲ್ – ಮಾಲೂರು - ತಮಿಳುನಾಡು ಗಡಿಯವರೆಗೆ ಒಟ್ಟು 123 ಕಿಮೀ ಉದ್ದದ ರಸ್ತೆಯನ್ನು ಹೈಬ್ರಿಡ್ ಆನ್ಯೂಟಿ ಯೋಜನೆಯಡಿ (HAM) ಕೆಆರ್‌ಡಿಸಿಎಲ್ ವತಿಯಿಂದ ಕೈಗೊಳ್ಳಲು ತಾತ್ವಿಕ ಅನುಮೋದನೆ ನೀಡುವ ಬಗ್ಗೆ.**

**ಓದಲಾಗಿದೆ:-** **2023-24 ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 239.**

******

**ಪ್ರಸ್ತಾವನೆ:**

ಮೇಲೆ ಓದಲಾದ 2023-24 ನೇ ಸಾಲಿನ ಆಯವ್ಯಯ ಕಂಡಿಕೆ ಸಂಖ್ಯೆ-239 ರಂತೆ ದೇವನಹಳ್ಳಿ–ವಿಜಯಪುರ-ಹೆಚ್.ಕ್ರಾಸ್–ವೇಮಗಲ್–ಮಾಲೂರು-ತಮಿಳುನಾಡು ಗಡಿವರೆಗೆ ಕೈಗಾರಿಕಾ ಸಂಪರ್ಕವನ್ನು ಕಲ್ಪಿಸಲು ನಾಲ್ಕು ಮತ್ತು ಆರು ಪಥದ 123 ಕಿ.ಮೀ ಉದ್ದದ ರಸ್ತೆ ನಿರ್ಮಾಣ ಕಾಮಗಾರಿಯನ್ನು ರೂ.1826.00 ಕೋಟಿ ಅಂದಾಜು ಮೊತ್ತದಲ್ಲಿ ಹೈಬ್ರಿಡ್ ಆನ್ಯೂಟಿ ಯೋಜನೆಯಡಿ (HAM) ಕೆಆರ್‌ಡಿಸಿಎಲ್ ವತಿಯಿಂದ ಕೈಗೊಳ್ಳಲಾಗುವುದು ಎಂದು ಘೋಷಿಸಲಾಗಿರುತ್ತದೆ.

ಸದರಿ ರಸ್ತೆಯು ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಸೇರಿದಂತೆ ಪ್ರಮುಖ ಕೈಗಾರಿಕಾ ಘಟಕಗಳಾದ ವೇಮಗಲ್ಲು, ನರಸಾಪುರ, ಮಾಲೂರು, ಹೊಸಕೋಟೆ ಮತ್ತು ಅಂತರಾಜ್ಯದ ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿದ್ದು, ಅಧಿಕ ವಾಹನ ಸಂಚಾರವಿರುತ್ತದೆ. ಈ ರಸ್ತೆಯು ಅಭಿವೃದ್ಧಿಯಾದಲ್ಲಿ ಪ್ರಮುಖ ಕೈಗಾರಿಕಾ ಪ್ರದೇಶಗಳ ಸಾರ್ವಜನಿಕ ಸಾರಿಗೆ ಸಂಪರ್ಕಕ್ಕೆ ತುಂಬಾ ಸಹಕಾರಿಯಾಗಿ ಆರ್ಥಿಕ ಪ್ರಗತಿಗೆ ಉತ್ತೇಜಕವಾಗಿರುತ್ತದೆ.

ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸುವುದರಿಂದ ಎರಡು ರಾಜ್ಯಗಳ ನಡುವೆ ಸಂಚರಿಸಲು ವಾಹನ ಸಂಚಾರಕ್ಕೆ, ಜನಸಾಮಾನ್ಯರಿಗೆ ಹಾಗೂ ಕೃಷಿ ಉತ್ಪನ್ನಗಳ ಸಾಗಣೆ, ವಿದ್ಯಾ ಸಂಸ್ಥೆಗಳ ಅಭಿವೃದ್ಧಿ, ಸಾರ್ವಜನಿಕ ಸಾರಿಗೆಗೆ ಕಡಿಮೆ ಅಂತರದ ಸಂಪರ್ಕ ರಸ್ತೆಯಾಗಿರುತ್ತದೆ.

ಮೇಲ್ಕಂಡ ಅಂಶಗಳಿಂದಾಗಿ ಪ್ರಸ್ತಾಪಿತ ರಸ್ತೆಯನ್ನು ಸಮಗ್ರ ಅಭಿವೃದ್ಧಿಪಡಿಸುವುದು ಅತ್ಯಂತ ಪ್ರಾಮುಖ್ಯವಾಗಿರುತ್ತದೆ.

ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ/174/ಆಕೋ-2/2023, ದಿನಾಂಕ:05-06-2023 ರಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಆಡಳಿತ ಇಲಾಖೆಯಿಂದ ಹೈಬ್ರಿಡ್ ಆನ್ಯೂಟಿ ಯೋಜನೆಯಡಿ (ವರ್ಷಾಸನ ಯೋಜನೆ) ರೂ.1826.00 ಕೋಟಿ ಅಂದಾಜು ಮೊತ್ತದಲ್ಲಿ ಕೆ.ಆರ್.ಡಿ.ಸಿ.ಎಲ್ ವತಿಯಿಂದ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುವ "ದೇವನಹಳ್ಳಿ-ವಿಜಯಪುರ-ಹೆಚ್.ಕ್ರಾಸ್-ಮೇಮಗಲ್-ಮಾಲೂರು-ತಮಿಳುನಾಡು ಗಡಿವರೆಗೆ ಕೈಗಾರಿಕಾ ಸಂಪರ್ಕವನ್ನು ಕಲ್ಪಿಸಲು ನಾಲ್ಕು / ಆರು ಪಥದ 123 ಕಿ.ಮೀ ಉದ್ದದ ರಸ್ತೆ

ನಿರ್ಮಾಣದ ಕಾಮಗಾರಿ" ಗೆ 2023-24ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ Special Assistance to states for Capital Investment ಯೋಜನೆಯಡಿ ರೂ.200.00 ಕೋಟಿ ಅನುದಾನ ಒದಗಿಸಲು ಅನುಮೋದಿಸಲಾಗಿದ್ದು, ಅದರಂತೆ ಸದರಿ ಯೋಜನೆಗೆ ಈ ಕೆಳಕಂಡ ಷರತ್ತಿನೊಂದಿಗೆ ಆರ್ಥಿಕ ಇಲಾಖೆಯು ಸಹಮತಿಸಿದೆ.

- ಪ್ರಸ್ತಾಪಿತ ಕಾಮಗಾರಿಯನ್ನು Hybrid Annuity Module (HAM) ನಡಿ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಲಾಗಿದೆ. ಪ್ರಸ್ತಾಪಿತ ಕಾಮಗಾರಿಗೆ ತಗಲುವ ನಿರ್ಮಾಣದ ವೆಚ್ಚ ರೂ.1660.00 ಕೋಟಿಗಳಲ್ಲಿ ಶೇ. 40 ರಷ್ಟು ಅಂದರೆ ರೂ.664.00 ಕೋಟಿಗಳನ್ನು ನಿರ್ಮಾಣದ ಅವಧಿಯಲ್ಲಿ upfront grant ರೂಪದಲ್ಲಿ ಹಾಗೂ ಉಳಿದ ರೂ.996.00 ಕೋಟಿಗಳನ್ನು ವರ್ಷಾಸನ (Annuity) ರೂಪದಲ್ಲಿ ಬಿಡುಗಡೆ ಮಾಡುವುದಾಗಿ ಆಡಳಿತ ಇಲಾಖೆಯಿಂದ ಪ್ರಸ್ತಾಪಿಸಲಾಗಿದ್ದು, ಅದರಂತೆ ಅಗತ್ಯವಿರುವ upfront grant ಮೊತ್ತ ರೂ.664.00 ಕೋಟಿಗಳಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಲು ಒಪ್ಪಿರುವ ರೂ.200.00 ಕೋಟಿ ಗಳನ್ನು ಉಪಯೋಗಿಸಿಕೊಂಡು ಉಳಿದ ರೂ.464.00 ಕೋಟಿ ಮೊತ್ತವನ್ನು KRDCL ನಿಗಮದ ಸಂಪನ್ಮೂಲದಿಂದ ಹಾಗೂ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಮಿತಿಯಲ್ಲಿ ಭರಿಸತಕ್ಕದ್ದು.
- ಯೋಜನೆಯ ಅನುಷ್ಠಾನಕ್ಕಾಗಿ ಅಗತ್ಯವಿರುವ ಭೂಸ್ವಾಧೀನ ಹಾಗೂ ಇತರೆ ಶಾಸನಬದ್ಧ ಅಗತ್ಯತೆಗಳ ಅನುಮೋದನೆ ಪಡೆದ ನಂತರವೇ ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡತಕ್ಕದ್ದು.
- ರಿಯಾಯಿತಿದಾರರಿಗೆ ವರ್ಷಾಸನ (Annuity) ವನ್ನು ಪ್ರಸ್ತಾಪಿತ ಯೋಜನೆಯಿಂದ ಸಂಗ್ರಹಿಸಲಾಗುವ ರಸ್ತೆ ಶುಲ್ಕ (Toll) ಹಾಗೂ ಒಂದು ವೇಳೆ ಈ ಶುಲ್ಕದಿಂದ ಭರಿಸಲು ಕೊರತೆ ಉಂಟಾದಲ್ಲಿ KRDCL ಆಂತರಿಕ ಸಂಪನ್ಮೂಲದಿಂದಲೇ ಭರಿಸಲು ಪ್ರಥಮ ಆದ್ಯತೆ ನೀಡತಕ್ಕದ್ದು. ಒಂದು ವೇಳೆ ಸಾಧ್ಯವಾಗದೇ ಇದ್ದಲ್ಲಿ ಸರ್ಕಾರದಿಂದ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದಲ್ಲಿ ಭರಿಸತಕ್ಕದ್ದು.
- Commercial Operation Date (CoD) ರಂದು ಪೂರ್ಣಗೊಳಿಸಲಾಗುವ ರಸ್ತೆಯ ಉದ್ದಕ್ಕೆ ಮಾತ್ರ pro-rata ಮಾದರಿಯಡಿ ವರ್ಷಾಸನವನ್ನು (Annuity) ನಿಗದಿಪಡಿಸತಕ್ಕದ್ದು.
- ಕರಡು ಟೆಂಡರ್ ದಸ್ತಾವೇಜು (Draft Tender Document) ಗೆ ಆರ್ಥಿಕ ಇಲಾಖೆಯಿಂದ ತೀರುವಳಿ ಪಡೆದು ಟೆಂಡರ್ ಪ್ರಕ್ರಿಯೆ ಕೈಗೊಳ್ಳತಕ್ಕದ್ದು.

ಮೇಲಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

**<u>ಸರ್ಕಾರದ ಆದೇಶ ಸಂಖ್ಯೆ ಲೋಇ ಇ-64 ಇಎಪಿ 2023, ಬೆಂಗಳೂರು, ದಿನಾಂಕ: 25-01-2024</u>**

ದೇವನಹಳ್ಳಿ – ವಿಜಯಪುರ - ಹೆಚ್.ಕ್ರಾಸ್ – ವೇಮಗಲ್ – ಮಾಲೂರು - ತಮಿಳುನಾಡು ಗಡಿಯವರೆಗೆ ಕೈಗಾರಿಕಾ ಸಂಪರ್ಕವನ್ನು ಕಲ್ಪಿಸಲು ನಾಲ್ಕು ಮತ್ತು ಆರು ಪಥದ 123 ಕಿ.ಮೀ ಉದ್ದದ ರಸ್ತೆ ನಿರ್ಮಾಣ ಕಾಮಗಾರಿಯನ್ನು ರೂ.1826.00 ಕೋಟಿ ಅಂದಾಜು ಮೊತ್ತದಲ್ಲಿ ಹೈಬ್ರಿಡ್ ಆನ್ಯೂಟಿ ಯೋಜನೆಯಡಿ (HAM) ಕೆಆರ್‌ಡಿಸಿಎಲ್ ವತಿಯಿಂದ ಕೈಗೊಳ್ಳಲು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ತಾತ್ವಿಕ ಅನುಮೋದನೆ ನೀಡಲಾಗಿದೆ.

1. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ/174/ಆಕೋ-2/2023, ದಿನಾಂಕ:05-06-2023 ರಲ್ಲಿನ ಷರತ್ತುಗಳನ್ನು ಪಾಲಿಸತಕ್ಕದ್ದು.
2. ಪ್ರಸ್ತಾಪಿತ ರಸ್ತೆ ನಿರ್ಮಾಣ ಕಾಮಗಾರಿಗೆ ಲಭ್ಯವಿರುವ ROW, ಹೆಚ್ಚುವರಿಯಾಗಿ ಅಗತ್ಯವಿರುವ ಭೂಮಿಯ ಪೂರ್ಣ ವಿವರಗಳನ್ನ, ಸಂಗ್ರಹಿಸಿ, ಭೂಸ್ವಾಧೀನಕ್ಕೆ ವಿವರವಾದ ಯೋಜನಾ ವರದಿಯಲ್ಲಿ ಅನುವು ಮಾಡತಕ್ಕದ್ದು.
3. ಯೋಜನೆಗೆ ಅಗತ್ಯವಿರುವ ಉಪಯುಕ್ತತೆ ಸ್ಥಳಾಂತರಿಸಲು ಅನುವು ಮಾಡತಕ್ಕದ್ದು.
4. ರಸ್ತೆಯ ಹಾಲಿ ವಾಹನ ಸಾಂದ್ರತೆಯನ್ನ ನಿಖರವಾಗಿ ಪರಿಗಣಿಸಿ ಭವಿಷ್ಯವರ್ತಿ ವಾಹನ ಸಾಂದ್ರತೆಯನ್ನ ಲೆಕ್ಕಾಚಾರ ಮಾಡಿ ರಸ್ತೆಯ ಜೀವಿತಾವಧಿಯನ್ನು ಪ್ರಸ್ತುತ ಚಾಲ್ತಿಯಲ್ಲಿರುವ IRC/MoRTH ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ವಿನ್ಯಾಸ ಮಾಡುವುದು.
5. ಕೆಆರ್‌ಡಿಸಿಎಲ್ ಸಂಸ್ಥೆಯು ಸದರಿ ರಸ್ತೆ ನಿರ್ಮಾಣ ಕಾಮಗಾರಿಗೆ ವಿವರವಾದ ವರದಿ ತಯಾರಿಸಿ ಸರ್ಕಾರಕ್ಕೆ ದಿನಾಂಕ:15-02-2024 ರೊಳಗೆ ಸಲ್ಲಿಸುವುದು.
6. ಈ ವರದಿ ತಯಾರಿಕೆ ವೆಚ್ಚವನ್ನು ಲೆಕ್ಕ ಶೀರ್ಷಿಕೆ:5054-80-190-0-01-132 ಕೆಆರ್ ಡಿಸಿಎಲ್ ಬಂಡವಾಳ ವೆಚ್ಚಗಳು ಅಡಿಯಲ್ಲಿ 2023-24 ನೇ ಸಾಲಿಗೆ ಒದಗಿಸಿರುವ ಅನುದಾನದಲ್ಲಿ ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹರ್ಷ ಬಿ.ಎಂ) 25/01/2024
ಸರ್ಕಾರದ ಅಧೀನ ಕಾರ್ಯದರ್ಶಿ (ಇಎಪಿ)
ಲೋಕೋಪಯೋಗಿ ಇಲಾಖೆ

ಗೆ,
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ರವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು.

ಪ್ರತಿಯನ್ನು :-
1. ಮಹಾಲೇಖಪಾಲರು (ಅಕೌಂಟ್ಸ್) ಕರ್ನಾಟಕ, ಬೆಂಗಳೂರು.
2. ಸನ್ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಲೋಕೋಪಯೋಗಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.

8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ರಾಜ್ಯ ರಸ್ತೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
9. ಸರ್ಕಾರದ ಅಪರ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
11. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ (ಆರ್ಥಿಕ ಕೋಶ), ಲೋಕೋಪಯೋಗಿ ಇಲಾಖೆ, ವಿಧಾನಸೌಧ, ಬೆಂಗಳೂರು.
12. ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
13. ಸರ್ಕಾರದ ಉಪಕಾರ್ಯದರ್ಶಿ, (ಸಂ ಮತ್ತು ಕ) ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
14. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ), ಬೆಂಗಳೂರು.
15. ಪ್ರಧಾನ ಇಂಜಿನಿಯರ್, PRAMC, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ವೆಬ್ ಸೈಟ್‌ನಲ್ಲಿ ಪ್ರಕಟಿಸಲು.
16. ಕಡತ / ಹೆಚ್ಚುವರಿ ಪ್ರತಿಗಳು.